**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

## ಸಿ.ಸಿ.ನಂ. 1911/2025

| | | |
|---|---|---|
| ಸಾಕ್ಷಿದಾರರ ಹೆಸರು | : | ಮಂಜು |
| ತಂದೆಯ ಹೆಸರು | : | ವೀರಭದ್ರಪ್ಪ |
| ವಯಸ್ಸು | : | 36 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹೀರೇಹಳ್ಳಿ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 28.07.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ-2 ರಿಂದ ಚಾಸಾ-4 ರವರ ಪರಿಚಯವಿರುತ್ತದೆ. ಅವರು ನಮ್ಮ ಗ್ರಾಮದವರೇ ಆಗಿರುತ್ತಾರೆ.

ದಿನಾಂಕ 25.04.2025 ರಂದು ಹಿರೇಹಳ್ಳಿ ಗ್ರಾಮದ ನಮ್ಮ 59/3 ಸರ್ವೆ ನಂಬರ್ ನ ಜಮೀನಿಗೆ ಹದ್ದುಬಸ್ತು ಮಾಡಿಸಿ ಕಲ್ಲು ಹಾಕಿಸಿರುತ್ತೇವೆ. ದಿನಾಂಕ 03.06.2025 ರಂದು ಮಧ್ಯಾಹ್ನ ಸುಮಾರು 2 ಗಂಟೆಯ ಹೊತ್ತಿಗೆ ಅರೋಪಿಗಳು ನಮ್ಮ ಸದರ ಸರ್ವೆ ನಂಬರ್ 59/3 ರ ಜಮೀನಿಗೆ ಅಕ್ರಮ ಪ್ರವೇಶ ಮಾಡಿ 1 ನೇ ಆರೋಪಿಯು ಸದರಿ ಅಳತೆ ಕಲ್ಲನ್ನು ಕಿತ್ತು ಅದನ್ನು ಎರಡು ತುಂಡು ಮಾಡಿರುತ್ತಾರೆ. ಸದರಿ ಕೃತ್ಯಕ್ಕೆ 2 ಹಾಗೂ 3 ನೇ ಆರೋಪಿಗಳು ಬೆನ್ನೆಲುಬು ಆಗಿರುತ್ತಾರೆ. ಈ ಬಗ್ಗೆ ನಾನು ಆರೋಪಿಗಳನ್ನು ಕೇಳಿದಾಗ 1 ನೇ ಆರೋಪಿಯು ನನಗೆ ಬೋಳಿ ಮಗನೇ, ಸೂಳೆ ಮಗನೇ ನೀನು ಏನು ಮಾಡುತ್ತೀಯ ಎಂದೆಲ್ಲಾ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ. ಅದಾದ ನಂತರ ನಾನು ಪಂಚಾಯಿತಿ ಸೇರಿಸಲು ಪ್ರಯತ್ನಿಸಿದ್ದು ಆದರೆ ಆರೋಪಿಗಳು ಅದಕ್ಕೆ ಬಂದಿರುವುದಿಲ್ಲ. ನಂತರ ದಿನಾಂಕ 06.08.2025 ರಂದು ನಾನು ಪೊಲೀಸ್ ಠಾಣೆಗೆ ಹೋಗಿ ಈ ಬಗ್ಗೆ ದೂರನ್ನು ನೀಡಿರುತ್ತೇನೆ.

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ನಾನು ಪೋಲಿಸರಿಗೆ ನೀಡಿದ ದೂರು ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ದೂರನ್ನು **ನಿ.ಪಿ.-1** ಎಂದು, ಸಾಕ್ಷಿಯ

ಸಹಿಯನ್ನು **ನಿ.ಪಿ.-1(ಎ)** ಎಂದು ಗುರುತಿಸಲಾಯಿತು.

ನಂತರ ಮರುದಿನ ಅಂದರೆ ದಿನಾಂಕ 07.08.2025 ರಂದು ಪೋಲಿಸರು ಕೃತ್ಯ ಸ್ಥಳಕ್ಕೆ ಬಂದಿದ್ದು ನಾನು ಪೋಲಿಸರಿಗೆ ಕೃತ್ಯ ಸ್ಥಳವನ್ನು ತೋರಿಸಿದ್ದು, ಪೋಲೀಸರು ನನ್ನ ಹಾಗೂ ಚಾಸಾ 3 ಹಾಗೂ 4 ರವರ ಸಮಕ್ಷಮ ಮಹಜರ್ ಬರೆದು ಹದ್ದುಬಸ್ತು ಕಲ್ಲಿನ ಎರಡು ತುಂಡುಗಳನ್ನು ವಶಪಡಿಸಿಕೊಂಡಿರುತ್ತಾರೆ. ಸದರಿ ಮಹಜರ್ ಅನ್ನು ಸಂಜೆ 5.30 ರಿಂದ 6.15 ಗಂಟೆಯವರೆಗೆ ಜರುಗಿಸಿರುತ್ತಾರೆ. ಸಾಕ್ಷಿಗೆ ಇನ್ನೊಂದು ದಾಖಲೆಯನ್ನು ತೋರಿಸಲಾಗಿ, ಸಾಕ್ಷಿಯು ಅದು ಮೇಲೆ ಹೇಳಿದಂತೆ ಪೋಲಿಸರು ಜರುಗಿಸಿದ ಮಹಜರ್ ಎಂದು ಗುರುತಿಸಿ, ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಮಹಜರ್ ಅನ್ನು **ನಿ.ಪಿ.-2** ಎಂದು, ಸಾಕ್ಷಿಯ ಸಹಿಯನ್ನು **ನಿ.ಪಿ.-2(ಎ)** ಎಂದು ಗುರುತಿಸಲಾಯಿತು. ಸಾಕ್ಷಿಗೆ ಒಂದು ಪೋಟೊವನ್ನು ತೋರಿಸಲಾಗಿ ಸಾಕ್ಷಿಯು ಅದು ಮಹಜರ್ ಸಮಯದಲ್ಲಿ ತೆಗೆದ ಪೋಟೋ ಎಂದು ಗುರುತಿಸಿರುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಪೋಟೋ ಅನ್ನು ನಿ.ಪಿ. -3 ಎಂದು , ಅದಕ್ಕೆ ಸಂಬಂದಿಸಿದ ಸಿ.ಡಿ. ಅನ್ನು ನಿ.ಪಿ.-4 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಎರಡು ಕಲ್ಲಿನ ತುಂಡುಗಳನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಎರಡು ಕಲ್ಲಿನ ತುಂಡುಗಳನ್ನು **ಮುದ್ದೆಮಾಲು-1** ಹಾಗೂ 2 ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದಿರುವ ಆರೋಪಿಗಳನ್ನು ನೋಡಿ ಗುರುತಿಸುತ್ತಾರೆ.

**ಪಾಟೀ ಸವಾಲುಃ ಶ್ರೀ. ಎಮ್.ಎಸ್.ಎಮ್. ಆರೋಪಿಗಳ ಪರ ವಕೀಲರಿಂದಃ**

ನಾನು ಹತ್ತನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಪೋಲೀಸ್ ಠಾಣೆಗೆ ದೂರನ್ನು ನೀಡಲು ಒಬ್ಬನೇ ಹೋಗಿರುತ್ತೇನೆ. ನಾನು ಸದರಿ ದೂರನ್ನು ಬರೆದುಕೊಂಡು ಠಾಣೆಗೆ ಹೋಗಿರುತ್ತೇನೆ. ನಾನು ದೂರನ್ನು ನೀಡಲು ದಿನಾಂಕ 06.08.2025 ರಂದು ಸಂಜೆ ಸುಮಾರು 4.00 ಗಂಟೆಗೆ ಹೋಗಿರುತ್ತೇನೆ. ಹಿರೇಹಳ್ಳಿ ಸರ್ವೆ ನಂಬರ್ 59/3 ರಲ್ಲಿ ಒಟ್ಟು 4 ಎಕರೆ 34 ಗುಂಟೆ ಜಮೀನು ಇದ್ದು ಅದು ದುರಾಸ್ತಾಗಿ ಹದ್ದುಬಸ್ತು ಆಗಿರುತ್ತದೆ. ಅಳತೆ ಮಾಡುವ ಪೂರ್ವದಲ್ಲಿ ಅಳತೆಯ 1 ವಾರದ ಪೂರ್ವದಲ್ಲಿ ಅಕ್ಕಪಕ್ಕದ ಜಮೀನಿನವರಿಗೆ ನೋಟೀಸ್ ಅನ್ನು ನೀಡಿರುತ್ತಾರೆ . ಆದರೆ ಯಾವ ದಿನಾಂಕ ಎಂದು ನನಗೆ ಈಗ ನೆನಪಿರುವುದಿಲ್ಲ. ಆರೋಪಿಗಳ ತಾಯಿಯ ಹೆಸರಿನಲ್ಲಿ ಜಮೀನಿದ್ದು ಅವರಿಗೆ ಅಳತೆಯ ಸಂಬಂದ ನೋಟೀಸ್ ನೀಡಿರುತ್ತಾರೆ. ಆರೋಪಿಗಳು ಅಳತೆ ಕಲ್ಲನ್ನು ನನ್ನ ಎದುರಲ್ಲೇ ಕಿತ್ತಿರುತ್ತಾರೆ. ಸದರಿ ನನ್ನ ಜಮೀನಿಗೆ ನಾನು ಆ ದಿನ ಬೆಳಗ್ಗೇ ಸುಮಾರು 7.00 ಗಂಟೆಗೆ ಹೋಗಿರುತ್ತೇನೆ. ನಾನು ರೈತ ಸಂಘದಲ್ಲಿ ಸದಸ್ಯನಾಗಿದ್ದೆ ಎಂದರೆ ಸರಿ . ಸದರಿ ದಿನದಂದು ನಾನು ಜಮೀನಿನ ಬಳಿ ಹೋಗಿರುವುದಿಲ್ಲ ಬದಲಾಗಿ ಆ ದಿನ ನಾನು ತಾಲ್ಲೂಕು ಕಛೇರಿಗೆ ಹೋಗಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ 03.06.2025 ರಂದು ಆರೋಪಿಗಳು ಅಳತೆ ಕಲ್ಲು ಕಿತ್ತಿದ್ದು ಅದೇ ತಿಂಗಳಿನಲ್ಲಿ ನಾನು ಪಂಚಾಯಿತಿಗೆ ಕರೆಸಲು ತಿಳಿಸಿರುತ್ತೇನೆ. ನಾನು ಪೋಲೀಸ್ ಠಾಣೆಗೆ ಈ ದೂರನ್ನು ನೀಡಿದ್ದೇ ಎಂದು ಹೇಳುವ ಪೂರ್ವದಲ್ಲಿ ಆರೋಪಿಗಳ ತಾಯಿ ನನ್ನ ವಿರುದ್ಧ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 180/2025 ರಂತೆ ಶಾಶ್ವತ ನಿರ್ಬಂದಕಾಜ್ಞೆ ಯನ್ನು ಕೋರಿ ದಾವೆ ಹೂಡಿರುತ್ತಾರೆ ಎಂದರೆ ಸರಿ. ನಾನು ಈ ದೂರನ್ನು ನೀಡಿದ್ದೆ ಎಂದು ಹೇಳಲಾದ ಅವದಿಯ ಹಿಂದೆಯೇ ಅಂದರೆ ದಿನಾಂಕ 07.05.2025 ರಂದು 1 ನೇ ಆರೋಪಿಯು ನನ್ನ ವಿರುದ್ಧ ಜಮೀನಿನಲ್ಲಿರುವ ಕಲ್ಲನ್ನು ಕಿತ್ತು ತೊಂದರೆ ಕೊಡುತ್ತಿರುವುದಾಗಿ ಹೆಚ್ ಡಿ ಕೋಟೆ ಪೋಲೀಸ್ ಠಾಣೆಗೆ ದೂರನ್ನು ನೀಡಿರುತ್ತಾರೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಸದರಿ ದೂರಿನ ಸಂಬಂದ ಪೋಲೀಸರು ನನ್ನನ್ನು ಠಾಣೆಗೆ ಕರೆಸಿದ್ದು ನಾನು ಅಲ್ಲಿ 1 ನೇ ಆರೋಪಿ ಸುಳ್ಳು ದೂರನ್ನು ನೀಡಿರುವುದಾಗಿ ಹೇಳಿಕೆ ನೀಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಆರೋಪಿಗಳು ಜಮೀನಿಗೆ ಯಾವುದೇ ಅಕ್ರಮ ಪ್ರವೇಶ ಮಾಡಿ ಅಳತೆ ಕಲ್ಲನ್ನು ಕಿತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಎಂದರೆ ಸರಿಯಲ್ಲ. ಚಾಸಾ 2 ರಿಂದ 4 ರವರು ನನ್ನ ಸಂಬಂದಿಕರು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಅವರು ನಮ್ಮ ಗ್ರಾಮಾಸ್ಥರಾಗಿರುತ್ತಾರೆ ಎಂದು ನುಡಿಯುತ್ತಾರೆ. ಚಾಸಾ 2 ರಿಂದ 4 ರವರು ಸಹ ರೈತ ಸಂಘದಲ್ಲಿ ಸದಸ್ಯರು ಎಂದರೆ ಸರಿ. ಸರ್ವೆ ನಂಬರ 59/3 ರ ಜಮೀನಿನ ಮೂಲ ಮಾಲೀಕರು ನನ್ನ ತಾತ ಆಗಿರುತ್ತಾರೆ. ನಮ್ಮ ಜಮೀನಿನ ಪಕ್ಕದಲ್ಲಿ ಆರೋಪಿಗಳಿಗೆ ಸೇರಿದ 57/3 ರಲ್ಲಿ 5 ಎಕರೆ 27 ಗುಂಟೆ ಜಮೀನಿದ್ದು ಅದನ್ನು ಅವರ ತಂದೆಯ ಕಾಲದಿಂದಲೂ ವ್ಯವಸಾಯ ಮಾಡಿಕೊಂಡು ಬರುತ್ತಿದ್ದರು ಎಂದರೆ ಸರಿ. ನನ್ನ ಜಮೀನಿಗೆ ಸಂಬಂದಿಸಿದ ಯಾವುದೇ ಸರ್ವೆ ಮಾಡಿಸಿದೇ ಇದ್ದರೂ ಸಹ ಆರೋಪಿಗಳ ತಾಯಿಯ ಹೆಸರಿನಲ್ಲಿರುವ ಜಮೀನನ್ನು ಕಬಳಿಸುವ ಉದ್ದೇಶದಿಂದ ಸರ್ವೆ ಮಾಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ನಾನು ಆರೋಪಿಗಳಿಗೆ ತೊಂದರೆ ಕೊಡುವ ಉದ್ದೇಶದಿಂದ ಶಾಶ್ವತ ನಿರ್ಬಂದಾಜ್ಞೆಯನ್ನು ಕೋರಿ ಅಸಲು ದಾವೆ ಸಂಖ್ಯೆ 10/2026 ಹಾಗೂ 79/2026 ರಂತೆ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಮಹಜರ್ ಗೆ ಬರುವಂತೆ ತಿಳಿಸಿ ಪೋಲೀಸರು ನನಗೆ ಯಾವುದೇ ನೋಟೀಸ್ ನೀಡಿರುವುದಿಲ್ಲ. ಸಾಕ್ಷಿ ಮುಂದುವರೆದು ಪೋನ್ ಕರೆ ಮಾಡಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಮಹಜರ್ ಸಮಯದಲ್ಲಿ ಚಾಸಾ 3 ಹಾಗೂ 4 ಇದ್ದು ಪೋಲೀಸರು ಬಂದ ನಂತರ ಅವರು ಬಂದಿರುತ್ತಾರೆ. ಮಹಜರ್ ನಲ್ಲಿ ಪೋಲೀಸರು ಏನು ಬರೆದಿರುತ್ತಾರೆ ಎಂದು ನಾನು ಓದಿ ತಿಳಿದಿರುವುದಿಲ್ಲ. ಸಾಕ್ಷಿ ಮುಂದುವರೆದು ಪೋಲೀಸರು ಓದಿ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ಮಹಜರ್ ಅನ್ನು ಪೋಲೀಸರು ಸ್ಥಳದಲ್ಲಿಯೇ ಬರೆದಿರುತ್ತಾರೆ. ಮಹಜರ್ ನ ಸಮಯದಲ್ಲಿ ಪೋಟೋ ಸಹ ತೆಗೆದಿರುತ್ತಾರೆ. ನಮ್ಮ ಜಮೀನಿನ ಉತ್ತರ ಭಾಗದಲ್ಲಿ ಅಳತೆ ಕಲ್ಲನ್ನು ಹಾಕಲಾಗಿತ್ತು . ನಿ.ಪಿ. -3 ಪೋಟೋ ಕಾಣುತ್ತಿಲ್ಲ. ಸಾಕ್ಷಿ ಮುಂದುವರೆದು ಸದರಿ ಪೋಟೋದಲ್ಲಿ ಕಾಣಿಸಿರುವ ಸ್ಥಳದಲ್ಲಿ ಅಳತೆ ಕಲ್ಲು ಇದ್ದಿದ್ದು ಅದನ್ನು ಆರೋಪಿಗಳು ಕಿತ್ತಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಗಳು ಯಾವುದೇ ಕಲ್ಲನ್ನು ಕೀಳದೆ ಇರುವುದರಿಂದ ಸದರಿ ಪೋಟೋದಲ್ಲಿ ಯಾವುದೇ ಕಲ್ಲಿನ ಚಿತ್ರ ಕಾಣಿಸುತ್ತಿಲ್ಲ ಎಂದರೆ ಸರಿಯಲ್ಲ. ಮುದ್ದೆಮಾಲು 1 ಹಾಗೂ 2 ರಂತೆ ಕಲ್ಲುಗಳು ಸಾಮಾನ್ಯವಾಗಿ ಎಲ್ಲರ ಜಮೀನಿನಲ್ಲಿ ಇರುತ್ತವೆ ಎಂದರೆ ಸರಿ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಆರೋಪಿಗಳು ನಮ್ಮ ಜಮೀನಿಗೆ ಯಾವುದೇ ಅಕ್ರಮ ಪ್ರವೇಶ ಮಾಡಿ ಅಳತೆ ಕಲ್ಲನ್ನು ಕಿತ್ತು ಅವಾಚ್ಯ ಶಬ್ದಗಳಿಂದ ಬೈದಿರುವುದಿಲ್ಲ ಬದಲಾಗಿ ಆರೋಪಿಗಳು ನಮ್ಮ ವಿರುದ್ಧ ಹಿಂದೆ ನೀಡಿದ ದೂರಿನಿಂದ ತಪ್ಪಿಸಿಕೊಳ್ಳುವ ಸಲುವಾಗಿ ಸುಳ್ಳು ದೂರನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಪೋಲೀಸರು ಯಾವುದೇ ಕೃತ್ಯ ನಡೆಯಲಾಯಿತು ಎಂದು ಹೇಳಿದ ಸ್ಥಳಕ್ಕೆ ಬಂದು ಮಹಜರ್ ಕ್ರಮ ಜರುಗಿಸಿ ಮುದ್ದೆಮಾಲು 1 ಹಾಗೂ 2 ಅನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ ಬದಲಾಗಿ ಸದರಿ ಮಹಜರ್ ಅನ್ನು ಠಾಣೆಯಲ್ಲಿ ಸೃಷ್ಟಿಸಿದ್ದು ಅದಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

<u>**ಮರು ವಿಚಾರಣೆ: ಇರುವುದಿಲ್ಲ**.</u>

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ಹೆಗ್ಗಡದೇವನಕೋಟೆ.**